ಓ ಎಸ್ ನಂಬರ 239/2021
ಪಿ. ಡಬ್ಲ್ಯೂ -1

**ದಿನಾಂಕ: 16.04.2025.**
**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಪಾಟೀ ಸವಾಲು: ಪ್ರತಿವಾದಿ ಪರ ವಕೀಲರಿಂದ:**

ನಾನು 7 ನೇ ತರಗತಿವರೆಗೆ ವ್ಯಾಸಂಗ ಮಾಡಿರುತ್ತೇನೆ. ಯಾವ ಸರ್ವೇ ನಂಬರಗೆ ಸಂಬಂಧಿಸಿದಂತೆ ದಾವೆಯನ್ನು ಹೂಡಿರುತ್ತೀರಿ ಎಂದರೆ ಸಾಕ್ಷಿ ಸರ್ವೇ ನಂಬರ 64/1 ಹಾಗೂ 135/3 ಕ್ಕೆ ಸಂಬಂಧಿಸಿದಂತೆ ದಾವೆ ಹೂಡಿರುತ್ತೇವೆ ಎನ್ನುತ್ತಾರೆ. ಸರ್ವೇ ನಂಬರ 64/1 ಯಾವ ಊರಿನಲ್ಲಿ ಬರುತ್ತದೆ ಎಂದರೆ ಸಾಕ್ಷಿ ಮಾಹಿತಿ ಇರುವುದಿಲ್ಲ ಎನ್ನುತ್ತಾರೆ. ದಾವಾ ಸ್ವತ್ತು ಮೂಲತಃವಾಗಿ ನನ್ನ ತಂದೆಯ ತಂದೆಯವರದು. ಸದರಿ ಸ್ವತ್ತು ಹೇಗೆ ಬಂದಿರುತ್ತದೆ ಎಂದು ನಾನು ದಾಖಲೆಗಳನ್ನು ನೋಡಿರುತ್ತೇನೆ. ದಾವಾ ಸ್ವತ್ತು ಮೊದಲು ಯಾರ ಹೆಸರಿನಲ್ಲಿತ್ತು ಎಂದರೆ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ. ನಮ್ಮ ಅಜ್ಜನವರು ಯಾವಾಗ ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಮ್ಮ ಅಜ್ಜನವರ ಹೆಸರು ಸಣ್ಣತಮ್ಮಪ್ಪ. ನಮ್ಮ ಅಜ್ಜನವರು ದಾವಾ ಸ್ವತ್ತನ್ನು ಖರೀದಿ ತೆಗೆದುಕೊಂಡಿದ್ದರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಎಷ್ಟನೇ ಇಸ್ವಿಯಲ್ಲಿ ಖರೀದಿ ತೆಗೆದುಕೊಂಡಿರುತ್ತಾರೆ ಎಂದರೆ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ. ನಮ್ಮ ಅಜ್ಜನಿಗೆ ಎಷ್ಟು ಜನ ಮಕ್ಕಳು ಎಂದು ಹೇಳಲು ಬರುವುದಿಲ್ಲ. ನಿಮಗೆ ವಂಶಾವಳಿಯ ಬಗ್ಗೆ ಸಂಪೂರ್ಣ ಮಾಹಿತಿ ಇರುವುದಿಲ್ಲ ಎಂದರೆ ಸರಿ. ನಿಮ್ಮ ವಂಶಾವಳಿಯಲ್ಲಿ ಮನೆತನದ ಆಸ್ತಿ ಯಾರು ಯಾರಿಗೆ ಎಷ್ಟೇಷ್ಟು ಹೋಗಿದೆ ಎಂದು ಮಾಹಿತಿ ಇಲ್ಲ ಎಂದರೆ ಸರಿ. ನಮ್ಮ ತಂದೆ ಹಾಗೂ ಅವರ ಅಣ್ಣತಮ್ಮಂದಿರ ನಡುವೆ ವಿಭಾಗವಾದ ಬಗ್ಗೆ ಮಾಹಿತಿ ಇದೆಯಾ ಎಂದರೆ ಸಾಕ್ಷಿ ಅಣ್ಣತಮ್ಮಂದಿರ ನಡುವೆ ವಾಟನಿಯಾಗಿರುತ್ತದೆ ಎನ್ನುತ್ತಾರೆ. ಯಾವಾಗ ವಿಭಾಗವಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಯಾವ ಆಸ್ತಿ ಸಂಬಂಧ ವಿಭಾಗವಾಗಿರುತ್ತದೆ ಎಂದರೆ ಸಾಕ್ಷಿ ನಮಗೆ ಏನನ್ನು ಅವರು ತಿಳಿಸಿಕೊಟ್ಟಿರುವುದಿಲ್ಲ ಎನ್ನುತ್ತಾರೆ. ನೀವು ಪ್ರಾಪ್ತ ವಯಸ್ಸಿಗೆ ಬಂದಾಗ ಮಾಡಿಕೊಂಡಿರುತ್ತಾರೋ ಅಥವಾ ಅದಕ್ಕೂ ಪೂರ್ವದಲ್ಲಿ ವಿಭಾಗ ಮಾಡಿಕೊಂಡಿರುತ್ತಾರಾ ಎಂದರೆ ಸಾಕ್ಷಿ ನಾವು ಸಣ್ಣವರಿದ್ದೇವು ನಮಗೆ ಏನು ತಿಳಿಸಿರುವುದಿಲ್ಲ ಎನ್ನುತ್ತಾರೆ.

2. ನಮ್ಮ ಅಜ್ಜಿಯ ಹೆಸರು ಬಾಗಮ್ಮ. ನಿಂಗಮ್ಮ ಬಾಗಮ್ಮ ರವರ ತಾಯಿ. ನಿಂಗಮ್ಮಳಿಗೆ ಬಾಗಮ್ಮ ಮತ್ತು ರುದ್ರಮ್ಮ ಇಬ್ಬರೂ ಮಕ್ಕಳು ಎಂದರೆ ಸರಿ. ರುದ್ರಮ್ಮ ಹಾಗೂ ಬಾಗಮ್ಮ ತೀರಿಕೊಂಡಿರುತ್ತಾರೆ. ಬಾಗಮ್ಮಳ ಗಂಡನ ಹೆಸರು ಸಣ್ಣತಮ್ಮಪ್ಪ. ಬಾಗಮ್ಮ ಸಣ್ಣತಮ್ಮಪ್ಪ ರವರಿಗೆ 3 ಜನ ಗಂಡು ಮಕ್ಕಳು ಅವರೆಂದರೇ 1 ನೇ ಪ್ರತಿವಾದಿ, ಯಲ್ಲಪ್ಪ ಹಾಗೂ ಸಿದ್ದಪ್ಪ ಹಾಗೂ 4 ಜನ ಹೆಣ್ಣು ಮಕ್ಕಳು ಅವರೆಂದರೇ

ನೀಲವ್ವ, ಮಲ್ಲವ್ವ, ಭೀಮವ್ವ ಹಾಗೂ ಗಂಗವ್ವ. ಅವರುಗಳಲ್ಲಿ ಒಬ್ಬರೂ ತೀರಿಕೊಂಡಿರುತ್ತಾರೆ ಉಳಿದವರು ಜೀವಂತ ಇರುತ್ತಾರೆ. ಯಾರು ತೀರಿಕೊಂಡಿರುತ್ತಾರೆ ಎಂದು ಗೊತ್ತಿಲ್ಲ. ದಾವಾ ಸ್ವತ್ತು ಮೂಲತಃವಾಗಿ ನಿಂಗವ್ವಳಿಗೆ ಸೇರಿದ್ದು ಎಂದರೆ ಸರಿ. ಸರಿದಯವರ ಅಡ್ಡಹೆಸರು ಕುರುಬರ ಎಂದರೆ ಸರಿ. ನಿಂಗವ್ವ ಹಾಗೂ ಅವರ ಮಕ್ಕಳು ಬಾಗವ್ವ ಮತ್ತು ರುದ್ರವ್ವ ರವರ ನಡುವೆ ವಿಭಾಗವಾದ ಬಗ್ಗೆ ನನಗೆ ಗೊತ್ತಿಲ್ಲ. ಬಾಗವ್ವ ಮತ್ತು ಅವರ ಮಕ್ಕಳು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ವಿಭಾಗವಾದ ಬಗ್ಗೆ ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲುಃ ಸಮಯ ಕೋರಿದ ಕಾರಣ ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಪ್ರ.ದಿ.ನ್ಯಾ. ಮತ್ತು ಪ್ರ.ದ.ನ್ಯಾ. ದಂ. ನ್ಯಾ. ಬೈಲಹೊಂಗಲ